**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ</u>**

**<u>ಸಿ.ಸಿ.ನಂಬರ್ಃ996/2022</u>**

ಪಿಡಬ್ಲ್ಯೂಃ 2

| | | |
|---|---|---|
| ಸಾಕ್ಷಿಯ ಹೆಸರು | : | ಎಸ್.ಸಿ. ಮೋಹನ್ ಕುಮಾರ್ |
| ತಂದೆಯ ಹೆಸರು | : | ಎಸ್.ಎಸ್. ಚಂದ್ರೇಗೌಡ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಮ್ಯಾನೇಜರ್, ಕರ್ನಾಟಕ ಗ್ರಾಮೀಣ ಬ್ಯಾಂಕ್, ಮೂಡಿಗೆರೆ ಶಾಖೆ |
| ವಾಸಸ್ಥಳ | : | ಮೂಡಿಗೆರೆ |

ಇಂದು ದಿನಾಂಕಃ16.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಪಿರ್ಯಾದಿ ಪರ ಶ್ರೀ ಎಸ್.ಡಿ. ವಕೀಲರಿಂದಃ

ನಾನು 22.05.2023 ರಿಂದ ಕರ್ನಾಟಕ ಗ್ರಾವೀಣ ಬ್ಯಾಂಕ್, ಮೂಡಿಗೆರೆ ಶಾಖೆಯಲ್ಲಿ ಮ್ಯಾನೇಜರ್ ಆಗಿ ಕಾರ್ಯನಿರ್ವಸುತ್ತಿದ್ದೇನೆ.

ಈ ಹಿಂದೆ ಇದ್ದ ಕಾವೇರಿ ಗ್ರಾಮೀಣ ಬ್ಯಾಂಕ್ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೊಂದಿಗೆ ವಿಲೀನಗೊಂಡಿರುತ್ತದೆ. ನಿಪಿ-1 ಚೆಕ್ಕಿನಲ್ಲಿ ನಮೂದಿಸಿರುವ ಖಾತೆಯು ಆರೋಪಿಗೆ ಸೇರಿದ್ದು. ಆರೋಪಿ ದಿನಾಂಕಃ05.09.2015 ರಿಂದ ಖಾತೆಯನ್ನು ಹೊಂದಿದ್ದಾರೆ. ಸಾಕ್ಷಿಯು ಆರೋಪಿ ಖಾತೆಯನ್ನು ತೆರೆಯವ ಕಾಲಕ್ಕೆ ಸಲ್ಲಿಸಿದ ಸ್ವವಿವರಗಳುಳ್ಳ ಅರ್ಜಿಯ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ಅರ್ಜಿದಾರರ ಮಾದರಿ ಸಹಿಗಳೂ ಸಹ ಇವೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಬಿ.ಟಿ.ಎನ್. ವಕೀಲರಿಂದಃ

1. ಕಾವೇರಿ ಗ್ರಾಮೀಣ ಬ್ಯಾಂಕ್ 2011 ರಲ್ಲಿ ಚಿಕೋ ಬ್ಯಾಂಕಿನಿಂದ ವಿಲೀನಗೊಂಡಿರುತ್ತದೆ. ದಿನಾಂಕಃ01.04.2019 ರಿಂದ ಕಾವೇರಿ ಗ್ರಾಮೀಣ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಜೊತೆ ವಿಲೀನಗೊಂಡಿರುತ್ತದೆ. ಕಾವೇರಿ ಗ್ರಾಮೀಣ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಜೊತೆ ವಿಲೀನಗೊಂಡ ನಂತರ, ದಿನಾಂಕಃ31.03.2020 ರವರೆಗೆ ಕಾವೇರಿ ಗ್ರಾಮೀಣ ಬ್ಯಾಂಕ್‌ಗಳ ಚೆಕ್ಕುಗಳನ್ನು ಮಾನ್ಯ ಮಾಡುತ್ತಿದ್ದೇವು. ಆ ನಂತರ ಸಲ್ಲಿಸಿದ ಚೆಕ್ಕುಗಳಿಗೆ ಖಾತೆ ಇಲ್ಲ ಎಂದು ಹಿಂಬರಹ ನೀಡಲಾಗುತ್ತಿತ್ತು. ನಿಪಿ-6 ರಲ್ಲಿರುವ ಖಾತೆ ಈಗ ಚಾಲ್ತಿಯಲ್ಲಿದೆ. ನಿಪಿ-6 ಅರ್ಜಿಯನ್ನು ನಾವು ಸ್ಕಾನ್ ಮಾಡಿ ನಮ್ಮ ಬ್ಯಾಂಕಿನ ವೆಬ್ ಸೈಟಿ ಅಪಲೋಡ್ ಮಾಡುತ್ತೇವೆ ಎಂದರೆ ಸರಿ. ಅದೇ ರಿತೀ ಖಾತೆದಾರರ ಮಾದರಿ ಸಹಿಗಳನ್ನು ಸಹ ಅಪಲೋಡ್ ಮಾಡುತ್ತೇವೆ ಎಂದರೆ ಸರಿ. ಆ ಬಗ್ಗೆ ಮಾಹಿತಿ ಲಭ್ಯವಿದೆ ಎಂದರೆ ಸರಿ.

2. ಯಾವುದೇ ಚಕ್ಕನ್ನು ಹಾಜರುಪಸಿಡಿದಾಗ, ಚೆಕ್ಕಿನಲ್ಲಿರುವ ಸಹಿ ಮತ್ತು ಮಾದರಿ ಸಹಿ ವ್ಯತ್ಯಾಸದಿಂದ ಕೂಡಿದರೆ ಅದೇ ರೀತಿಯ ಹಿಂಬರಹ ನೀಡುತ್ತೇವೆ. ನಿಪಿ-1 ಎ ಸಹಿ ಮತ್ತು ನಿಪಿ-6 ರಲ್ಲಿರುವ ಅರ್ಜಿದಾರರ ಸಹಿಗಳು ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. ಆ ಎರಡು ಸಹಿಗಳು ವ್ಯತ್ಯಾಸದಿಂದ ಕೂಡಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವ ರೀತಿಯ ಹಿಂಬರಹ ನೀಡಿರುತ್ತೀರಿ ಎಂದರೆ ಸಾಕ್ಷಿಯು ನಿಪಿ-1 ಚೆಕ್ಕನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್ ಜೊತೆಗೆ ವಿಲೀನವಾದ ನಂತರ ಹಿಂದಿರುಗಿಸಿ ಹೊಸ ಚೆಕ್ ಬುಕ್ಕನ್ನು ಪಡೆಯಬೇಕಾಗಿದ್ದು, ಒಂದು ವೇಳೆ ಪಡೆಯದೇ ಹಳೆಯ ಚೆಕ್ಕನ್ನು ಹಾಜರುಪಡಿಸಿದರೆ, ಕಂಪ್ಯೂಟರಿನಲ್ಲಿ ಆ ರೀತಿಯ ಯಾವುದೇ ಖಾತೆ ಇಲ್ಲ ಎಂದು ಹಿಂಬರಹ ಜನರೇಟ್ ಆಗುತ್ತ ದೆ ಎಂದು ನುಡಿಯುತ್ತಾರೆ. ಬ್ಯಾಂಕ್ ವಿಲೀನಗೊಂಡ ನಂತರ ಅಕೌಂಟ್ ನಂಬರ ಬದಲಾದ ಬಗ್ಗೆ ಯಾವುದೇ ನೋಟಿಸು ನೀಡಿರುವುದಿಲ್ಲ, ಆದರೆ ಸಾರ್ವಜನಿಕ ನೋಟಿಫಿಕೇಶನ್ ಇರುತ್ತದೆ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ